### ಮಾರ್ಗದರ್ಶಕ

ಕಿರಿಯ ಸಂನ್ಯಾಸಿಗಳನ್ನೂ ಬ್ರಹ್ಮಚಾರಿಗಳನ್ನೂ ತರಬೇತುಗೊಳಿಸುವುದರಲ್ಲಿ ಅವರ ಪಾತ್ರ ಮಹತ್ವಪೂರ್ಣವಾಗಿರುತ್ತಿತ್ತು. ಕಳೆಕೀಳುವ ಕೆಲಸವನ್ನು ಕಿರಿಯರು ಮಾಡುವಾಗ, "ಬೇರುಸಮೇತ ಕಳೆಯನ್ನು ಕಿತ್ತುಹಾಕಿ, ಹುಡುಗರೇ" ಎಂದು ಕೂಗಿ ಹೇಳುತ್ತಿದ್ದರು. ಕಾಮಕಾಂಚನಗಳ ಕಳೆಯನ್ನೂ ಬೇರುಸಹಿತ ಕಿತ್ತುಹಾಕಬೇಕೆಂಬುದಕ್ಕೆ ಅದು ಸಂಕೇತವಾಗಿರುತ್ತಿತ್ತು. ಅಗತ್ಯಬಿದ್ದಾಗ ಕಠಿಣಮನಸ್ಕರೆಂಬಂತೆ ತೋರಿಕೊಳ್ಳುವುದೂ ಇತ್ತು. "ಹಸುಗಳಿಗೆ ಹುಲ್ಲು ಕತ್ತರಿಸಿಹಾಕಪ್ಪಾ" ಎಂದು ಪ್ರೇಮಾನಂದರು ಹೇಳಿದಾಗ ಬ್ರಹ್ಮಚಾರಿಯು, 'ಇದೇನು ಮಹಾ' ಎಂದು ಅಸಡ್ಡೆಯಿಂದ ಮುನ್ನುಗ್ಗಿ ಬೆರಳನ್ನು ಗಾಯ ಮಾಡಿಕೊಂಡನು. ಅದನ್ನು ಗಮನಿಸಿದ ಪ್ರೇಮಾನಂದರು, "ನೀನೂ ಮೂರ್ಖನಾದೆ, ನನ್ನನ್ನೂ ದೊಡ್ಡ ಮೂರ್ಖನನ್ನಾಗಿ ಮಾಡಿದೆ" ಎಂದು ಬೈದರು. ಮಠದ ಇತಿಹಾಸದಲ್ಲಿ ಅವರ ಬೈಗುಳವೂ ದಂತಕಥೆಯಾಗಿತ್ತು.

ಎಣ್ಣೆ ಬಗ್ಗಿಸುವಾಗ ಚೆಲ್ಲಿದರೆ, ಆಲೂಗಡ್ಡೆಯ ಸಿಪ್ಪೆಯನ್ನು ಮಂದವಾಗಿ ಹೆರೆದರೆ ಪ್ರೇಮಾನಂದರು, "ಭಕ್ತರ ಕಷ್ಟಾರ್ಜಿತ ಹಣದಿಂದ ತಂದಿರುವುದಲ್ಲವೇ, ಎಚ್ಚರವಾಗಿರಿ" ಎನ್ನುತ್ತಿದ್ದರು. ಸಂನ್ಯಾಸಿಗಳಿಂದ ಬೈಸಿಕೊಳ್ಳುವುದೂ ಒಳ್ಳೆಯದೇ, ಬೈಸಿಕೊಂಡವರ ಮನೋಬುದ್ಧಿಗಳು ನಿರ್ಮಲವಾಗುತ್ತವೆ ಎಂದು ಹೇಳುತ್ತಿದ್ದರು. ಕಾಯಕವನ್ನು ಪೂಜೆಯೆಂದು ಪರಿಗಣಿಸಿ ಎಂದು ಮೇಲಿಂದ ಮೇಲೆ ಮನವರಿಕೆ ಮಾಡಿಕೊಡುತ್ತಿದ್ದರು. ತಾವೇ ಬೆರಣಿ ತಟ್ಟಿ, ಎಂಜಲೆಲೆ ಎತ್ತಿ, ಶೌಚಾಲಯ ತೊಳೆದು, ಕೊಳದ ಪಾಚಿಯನ್ನೆತ್ತಿ ತಮ್ಮ ಸಹಚರರಿಗೆ ಮಾದರಿಯಾಗುತ್ತಿದ್ದರು. "ಸಂನ್ಯಾಸಿಯ ಚೀಲಕ್ಕೆ ಎರಡು ಬಾಯಿಗಳಿರಬೇಕು. ಒಂದರಿಂದ ತುಂಬಿದರೆ ಇನ್ನೊಂದರಿಂದ ಬರಿದುಮಾಡಬೇಕು. ನೀವು ಭಕ್ತರ ಸೇವೆ ಮಾಡಿ, ಆಗ ಭಕ್ತರ ಹೃದಯದಲ್ಲಿಯೂ ಸೇವೆಯ ಬೀಜವು ಮೊಳಕೆಯೊಡೆಯುತ್ತದೆ. ನಿಮ್ಮ ಜೀವನಶೈಲಿಯಿಂದಲೇ ಭಕ್ತರಿಗೆ ಪಾಠ ಕಲಿಸಿರಿ. ಸಹನೆ, ತಾಳ್ಮೆ, ಕ್ಷಮೆ, ಕಷ್ಟಸಹಿಷ್ಣುತೆ, ವಿನಯ ಮುಂತಾದ ಸದ್ಗುಣಗಳ ಸಾಕಾರಮೂರ್ತಿ ನೀವಾಗಿ" ಎಂದು ಮುಂತಾಗಿ ಅವರು ಬೋಧಿಸುತ್ತಿದ್ದರು.

### ಸಮನ್ವಯದೃಷ್ಟಿಯ ಹರಿಕಾರ

ಪ್ರೇಮಾನಂದರು ಒಳ್ಳೆಯ ವಾಗ್ಮಿಯಾಗಿದ್ದರು. ಉತ್ತರಬಂಗಾಳದ ಮಾಲ್ಡಾ ನಗರಕ್ಕೆ ಶ್ರೀಮಾತೆಯವರ ಅಪ್ಪಣೆ ಪಡೆದು ಅವರೊಮ್ಮೆ ಶ್ರೀರಾಮಕೃಷ್ಣರ ಮಹೋತ್ಸವಕ್ಕೆ ಹೋಗಿದ್ದರು. ಈ ಯುಗದಲ್ಲಿ ಮಾನವಸೇವೆಯ ಮೂಲಕವೇ ಭಗವಂತನನ್ನು ಕಾಣಬೇಕು ಎಂದು ಬೋಧಿಸಿದರು. 'ಪ್ರೇಮಭಕ್ತಿಗಳನ್ನು ಕುರಿತು ತಾವು ಮಾತನಾಡಬೇಕು' ಎಂದು ಭಕ್ತರು ಬೇಡಿದಾಗ ಅವರ ವಾಣಿ ಅತ್ಯಂತ ಪ್ರಭಾವಶಾಲಿಯಾಗಿತ್ತು: "ವ್ಯಾಪಾರಿಯೊಬ್ಬನು ಬೀದಿಯ ಮೇಲೆ ಹೋಗುತ್ತಾ 'ಪ್ರೇಮ ಬೇಕೇ ಪ್ರೇಮ, ಯಾರಿಗೆ ಬೇಕು ಪ್ರೇಮ' ಎಂದು ಸಾರುತ್ತಿದ್ದನು. 'ಅಪರೂಪದ ವಸ್ತುವಲ್ಲವೇ, ಕೊಳ್ಳೋಣ' ಎಂದು ಜನರು ಬಾಗಿಲು ತೆರೆದರು. 'ಬೆಲೆ ಎಷ್ಟು ನಿನ್ನ ಪ್ರೇಮಕ್ಕೆ?' ಎಂದು ಕೇಳಿದರು. ಆಗ ವ್ಯಾಪಾರಿಯು 'ಪ್ರೇಮಕ್ಕೆ ಬೆಲೆ ಕಟ್ಟಲುಂಟೇ, ನಿಮ್ಮ ತಲೆಗಳನ್ನೇ ಸಮರ್ಪಿಸಿ ಕೊಂಡುಕೊಳ್ಳಬೇಕು' ಎಂದನು. ಆಗ ಜನರು ಮರುಮಾತನಾಡದೆ ಮನೆಗಳಿಗೆ ಹೋಗಿ ಬಾಗಿಲು ಬಡಿದುಕೊಂಡರು." "ಅವರ ವಿಚಾರ ಹಾಗಿರಲಿ, ನೀವಾದರೂ ತಲೆಕೊಡುತ್ತೀರೋ" ಎಂದು ಪ್ರೇಮಾನಂದರು ಸವಾಲು ಹಾಕಿದಾಗ ಅಲ್ಲಿಯೂ ಮೌನವೇ ಆವರಿಸಿತ್ತು.

ಪೂರ್ವ ಬಂಗಾಳ ಅಂದರೆ, ಇಂದಿನ ಬಾಂಗ್ಲಾದೇಶವನ್ನು ಸಂದರ್ಶಿಸಿದ ಪ್ರೇಮಾನಂದರು ಢಾಕಾದ ನವಾಬ ಸಲೀಮುಲ್ಲಾ ಮತ್ತು ಆತನ ಮಡದಿಯ ಗೌರವಾದರಗಳಿಗೆ ಪಾತ್ರರಾದರು. ರಾಮಕೃಷ್ಣರ ಉತ್ಸವಕ್ಕೆ 'ಇವರು, ನಮ್ಮ ಪೀರ್ ಸಹ ಹೌದು' ಎಂದು ಮುಸ್ಲಿಮರೂ ವಂತಿಕೆಯನ್ನು ಕೊಟ್ಟರು. "ಹಿಂದೂ ಮುಸ್ಲಿಮರು ನಾವು ಪರಸ್ಪರ ಸೋದರರು. ದ್ವೇಷವಿಲ್ಲದೆ ನಮ್ಮ ನಮ್ಮ ದೇವರುಗಳನ್ನು ಪೂಜಿಸಿದರೆ ನಮ್ಮ ದಿವ್ಯದೃಷ್ಟಿಯು ತೆರೆಯುತ್ತದೆ, ನಾವೆಲ್ಲರೂ ಒಂದು ಎಂದು ಮನವರಿಕೆಯಾಗುತ್ತದೆ" ಎಂದು ಪ್ರೇಮಾನಂದರು ಉಪದೇಶಿಸಿದರು. ಪೂರ್ವಬಂಗಾಳದ ಮೈಮೆನ್‌ಸಿಂಗ್ ಎಂಬಲ್ಲಿಗೆ ಹೋಗಿದ್ದಾಗ ಮುಸ್ಲಿಂ ಉಪಾಧ್ಯಾಯರೊಬ್ಬರು ನೀಡಿದ ಭೋಜನವನ್ನು ಸ್ವೀಕರಿಸಿ, ತಮ್ಮ ಹೃದಯವೈಶಾಲ್ಯವನ್ನು ಮೆರೆದರು.


### ಪ್ರೇಮದಂಗಡಿ ಮುಚ್ಚಿತು

ಆ ಅವಧಿಯಲ್ಲಿ ವಿಶ್ವಾದ್ಯಂತ ಕಾಡುತ್ತಿದ್ದ ವಿಷಮಶೀತಜ್ವರಕ್ಕೆ ಪ್ರೇಮಾನಂದರೂ ಬಲಿಯಾಗಿ ೧೯೧೮ ರ ಜುಲೈ ೩೦ರಂದು ಪರಮಪದವನ್ನೈದಿದರು. "ಪ್ರೇಮಾನಂದರು ತಮ್ಮ ಪ್ರೇಮದಂಗಡಿಯನ್ನು ಮುಚ್ಚಿ, ತ್ಯಾಗಪ್ರೇಮಗಳೆಂಬ ರೆಕ್ಕೆಗಳನ್ನು ಬಿಚ್ಚಿ, ಅನಂತದೆಡೆಗೆ ಹಾರಿಹೋದರು. 'ಎಲ್ಲರನ್ನೂ ಪ್ರೇಮಿಸಬೇಕು ಎಂದೆನಿಸಿದೆ. ಅದೇ ನನಗೀಗ ಹಿಡಿದಿರುವ ಕಾಯಿಲೆ' ಎಂದು ಮರಣಕ್ಕೆ ಮುಂಚೆ ಪತ್ರವೊಂದರಲ್ಲಿ ಯಾರಿಗೋ ಬರೆದಿದ್ದರು" ಎಂದು ಸ್ವಾಮಿ ಚೇತನಾನಂದರು ಉದ್ಗರಿಸಿದ್ದಾರೆ (*ದೇವರೊಡನೆ ಬಾಳಿದವರು,* ಪುಟ ೨೫೬).

# ಮಾಣಿಕವಾಚಕರ್


**ಕಥೆ:** ಆರ್.ವಿ.
**ಚಿತ್ರ:** ಶಂಕರ್

**1** ಅರಿಮರ್ದನ ಪಾಂಡ್ಯನ್ ಎಂಬ ರಾಜನು ಮದುರೈ ನಗರವನ್ನು ಆಳುತ್ತಿದ್ದನು. 'ತಿರುವದವುರರ್' ಎಂಬ ಶಿವಭಕ್ತನು ಅವನ ಪ್ರಧಾನಮಂತ್ರಿ. ಒಂದು ದಿನ ಸೇನಾಪತಿಯು ರಾಜಸಭೆಯನ್ನು ಪ್ರವೇಶಿಸಿ...





**2** ಮರುದಿನ ತಿರುವದವುರರ್ ಸೇನೆಯ ಜೊತೆಗೂಡಿ, ಪಲ್ಲಕ್ಕಿಯಲ್ಲಿ ಸಮುದ್ರತೀರದ ಕಡೆಗೆ ಹೊರಟನು. ಚಿನ್ನದ ನಾಣ್ಯಗಳಿಂದ ತುಂಬಿದ ಚೀಲಗಳನ್ನು ಒಂಟೆಯ ಮೇಲೆ ಹೊರಿಸಿಕೊಂಡು ಒಯ್ಯಲಾಯಿತು.


**3** ಭಗವಾನ್ ಶಿವನು ತಿರವದವುರರ್‌ನ ಮೇಲೆ ಕೃಪೆ ದೋರಲು ನಿರ್ಧರಿಸಿ, ತಿರುಪೆರುಂದುರೈ ಎಂಬ ಪಟ್ಟಣದ ಒಂದು ಆಲದ ಮರದ ಕೆಳಗೆ ಕುಳಿತನು. ಅವನನ್ನು ಸುತ್ತುವರಿದು ಅವನ ಶಿಷ್ಯರು ಕುಳಿತರು. ಈ ದೃಶ್ಯವನ್ನು ನೋಡಿ...





**4** ತಿರುವದವುರರ್ ಪಲ್ಲಕ್ಕಿಯಿಂದ ಕೆಳಗಿಳಿದು, ಶಿವನಿಗೆ ನಮಸ್ಕಾರ ಮಾಡಿದನು. ಶಿವನು ಅವನಿಗೆ ಮಂತ್ರದೀಕ್ಷೆಯನ್ನು ಕೊಟ್ಟು, ತನ್ನ ದಿವ್ಯ ಸ್ವರೂಪವನ್ನು ತೋರಿಸಿದನು. ತಿರುವದವುರರ್ ಭಾವಾವಿಷ್ಟನಾಗಿ ಮಾಣಿಕ್ಯದಂತೆ ಪ್ರಕಾಶಮಾನವಾದ ಸ್ತೋತ್ರಗಳಿಂದ ಶಿವನನ್ನು ಸ್ತುತಿಸಿದನು. ಅಂದಿನಿಂದ ಅವನು **ಮಾಣಿಕವಾಚಕರ್** (ಮಾಣಿಕ್ಯದಂಥ ಮಾತುಗಳುಳ್ಳವನು) ಎಂದು ಪ್ರಸಿದ್ಧನಾದನು.



**5** ಶಿವಭಕ್ತಿಯಲ್ಲಿ ತನ್ಮಯನಾದ ಪ್ರಧಾನಮಂತ್ರಿಯು ರಾಜನು ಅವನಿಗೆ ವಹಿಸಿದ್ದ ಕಾರ್ಯವನ್ನು ಮರೆತನು. ಕುದುರೆಗಳನ್ನು ಕೊಳ್ಳಲು ತಂದಿದ್ದ ಹಣದಿಂದ ಶಿವದೇವಾಲಯವನ್ನು ನಿರ್ಮಿಸಿದನು.




**6** ನಿಗದಿಯಾದ ಸಮಯದಲ್ಲಿ ಕುದುರೆಗಳು ತಲುಪದಿದ್ದಾಗ ಪ್ರಧಾನಮಂತ್ರಿಯನ್ನು ವಿಚಾರಿಸಲು ರಾಜನು ತನ್ನ ಸೈನಿಕರನ್ನು ಅವನ ಬಳಿಗೆ ಕಳುಹಿಸಿದನು.





ಹೀಗೆ ಶಿವನ ಅಶರೀರವಾಣಿಯು ಹೇಳಿತು.


**7** ಪ್ರಧಾನಮಂತ್ರಿಯು ಕುದುರೆಗಳ ಖರೀದಿಗೆ ಮೀಸಲಾದ ಹಣದಿಂದ ಶಿವದೇವಾಲಯವನ್ನು ಕಟ್ಟಿಸಿದ ವಿಷಯ ರಾಜನಿಗೆ ತಲುಪಿತು. ಕೋಪೋದ್ರಿಕ್ತನಾದ ರಾಜನು ತಿರುವದವುರರ್‌ನನ್ನು ಸೆರೆಹಿಡಿದು, ಎಳೆದುಕೊಂಡು ಬರುವಂತೆ ಸೈನಿಕರಿಗೆ ಆಜ್ಞಾಪಿಸಿದನು. ಸೈನಿಕರು ಅವನನ್ನು ಹಿಡಿದು ರಾಜನ ಮುಂದೆ ಎಳೆದೊಯ್ದರು.




**8** ಕಾವಲುಗಾರರು ಪ್ರಧಾನಮಂತ್ರಿಯನ್ನು ಕತ್ತಲಿನ ಸೆರೆಮನೆಯಲ್ಲಿಟ್ಟು, ಭಾರವಾದ ಇಟ್ಟಿಗೆಗಳನ್ನು ಹೊರುವ ಶಿಕ್ಷೆ ಕೊಟ್ಟರು.

**9** ಶಿವನ ಕೃಪೆಯಿಂದ ಸುತ್ತಮುತ್ತಲೂ ಇದ್ದ ನರಿಗಳೆಲ್ಲ ಉತ್ತಮ ತಳಿಯ ಕುದುರೆಗಳಾದವು. ಶಿವನ ಗಣಗಳು ರಾವುತರಾದರು. ಸ್ವಯಂ ಶಿವನು ಅವರ ಮುಖಂಡನಾದನು. 'ಮೂಲಂ' ಪವಿತ್ರ ದಿನದಂದು ಈ ಕುದುರೆಗಳ ಮೆರವಣಿಗೆಯು ಮದುರೈಯ ಬೀದಿಗಳನ್ನು ಪ್ರವೇಶಿತು.




10
ಓಹೋ! ಅತ್ಯದ್ಭುತವಾದ ಕುದುರೆಗಳು ಮತ್ತು ಕುದುರೆಸವಾರರು! ಸೈನಿಕರೇ, ಈ ಕೂಡಲೇ ಪ್ರಧಾನ ಮಂತ್ರಿಗಳನ್ನು ಬಿಡುಗಡೆಗೊಳಿಸಿ, ಅವರನ್ನು ಗೌರವದಿಂದ ಇಲ್ಲಿಗೆ ಕರೆದುಕೊಂಡು ಬನ್ನಿ.
11
ತಿರುವದವುರರ್, ಸರಿಯಾಗಿ ಆಲೋಚಿಸದೆ, ನಿನಗೆ ಕಿರುಕುಳ ಕೊಟ್ಟೆ. ದಯವಿಟ್ಟು ಕ್ಷಮಿಸು.
12
ಆ ರಾತ್ರಿ ನಗರದೆಲ್ಲೆಡೆ ನರಿಗಳ ಕೂಗು ಕೇಳಿಸಿತು. ನಿದ್ರೆಯಿಂದ ಎಚ್ಚರಗೊಂಡ ರಾಜನು ಭಟರನ್ನು ವಿಚಾರಿಸಿದನು.
ಓ! ಎಂಥ ವಂಚನೆ! ನರಿಗಳು ಕುದುರೆಗಳಾಗಿ ಕಂಡವು. ಆ ದ್ರೋಹಿಯಾದ ಪ್ರಧಾನಮಂತ್ರಿಯನ್ನು ಸೆರೆಹಿಡಿಯಿರಿ. ಅವನಿಗೆ ಕಠಿಣವಾದ ಶಿಕ್ಷೆಯನ್ನು ವಿಧಿಸಿ.
13
ತಿರುವದವುರರ್‌ನನ್ನು ಪುನಃ ಬಂಧಿಸಿ ಚಿತ್ರಹಿಂಸೆ ನೀಡಲಾಯಿತು.
14
ಶಿವನ ಸಂಕಲ್ಪದಂತೆ, ವೈಗೈ ನದಿಯಲ್ಲಿ ಕೂಡಲೇ ಪ್ರವಾಹ ಬಂದು, ನೀರು ನಗರವನ್ನು ಪ್ರವೇಶಿಸತೊಡಗಿತು. ರಾಜನು ಪುರಜನರ ಹತ್ತಿರ ಓಡಿಹೋಗಿ...
ಕಟ್ಟೆಯಲ್ಲಿಯ ಬಿರುಕನ್ನು ಮುಚ್ಚಲು ಪ್ರತಿಯೊಂದು ಮನೆಯಿಂದಲೂ ಒಬ್ಬ ವ್ಯಕ್ತಿ ಮುಂದೆ ಬನ್ನಿ. ಮಣ್ಣಿನ ಒಡ್ಡನ್ನು ಹಾಕಿ ಪ್ರವಾಹವನ್ನು ತಡೆಹಿಡಿಯೋಣ.